

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ವಾಯುವಿಹಾರ ಮತ್ತು ವಿಚಾರವಿಹಾರ!....

**ಸಿ**ರಿಗೆರೆಯಲ್ಲಿದ್ದಾಗಲೆಲ್ಲಾ ನಮ್ಮ ಮಠದ ಶಾಂತಿವನದೊಳಗೆ ಮುಂಜಾವದಲ್ಲಿ ನಾಲ್ಕಾರು ಕಿ.ಮೀ. ವಾಯುವಿಹಾರ ಹೋಗುವುದು ನಾವು ರೂಢಿಸಿಕೊಂಡು ಬಂದ ದಿನಚರಿ. ಮೂಡಣದಲ್ಲಿ ಅರುಣೋದಯದ ನಸುಗೆಂಪು, ಆಗಸದಲ್ಲಿ ಚಲಿಸುವ ಬಂಗಾರದ ಗಟ್ಟಿಗಳಂತಿರುವ ಮೋಡಗಳು, ಸ್ವಚ್ಛಂದವಾಗಿ ಹಾರುವ ಹಕ್ಕಿಗಳ ಕಲರವ, ಬಾನಂಗಳನ್ನು ತ್ರಿವರ್ಣಗಳಿಂದ ರಂಗೇರಿಸುವ ಯುದ್ಧ ವಿಮಾನಗಳ Airshow ನಂತೆ ಅಕ್ಕಪಕ್ಕದಲ್ಲಿ ಸಾಲುಸಾಲಾಗಿ ಸಾಗುವ ಬೆಳ್ಳಕ್ಕಿಗಳ ಹಿಂಡು, ಕಾಗೆಗಳ ಕರ್ಕಶ ದನಿಯಿಂದ ಬೇಸತ್ತ ಕಿವಿಗಳಿಗೆ ಇಂಪಾಗಿ ಸ್ವರಗೈವ ಕೋಗಿಲೆಗಳು, ಮೈಗೆ ಹಿತಕರವಾಗಿ ಬೀಸುವ ತಂಗಾಳಿ, 'ಮಂದಂ ಮಂದಂ ನುದತಿ ಪವನಃ' ಎಂಬ ಕಾಳಿದಾಸನ ಮೇಘದೂತದ ಸಾಲುಗಳ ನೆನಪು, ಮಠದಿಂದಲೇ ಒಂದು ಕೋಟಿಗೂ ಹೆಚ್ಚು ಖರ್ಚುಮಾಡಿ ನಿರ್ಮಿಸಿದ ಚಿಕ್ಕ ಅಣೆಕಟ್ಟು, ಈ ವರ್ಷ ಮುಂಗಾರು ಮಳೆಯಿಂದ ಆಗಲೇ ಎರಡು ಬಾರಿ ತುಂಬಿ ಹರಿದ ಶಾಂತಿಸರೋವರ, ಅದರಲ್ಲಿ ಆಗಸದಿಂದ ಬಂದಿಳಿದು ಘನಗಂಭೀರವಾಗಿ ಈಜುತ್ತಾ ಮುಳುಗೇಳುತ್ತಾ ಮಹಾಮಜ್ಜನವ ಮಾಡಿ ಮತ್ತೆ ಗರಿಗೆದರಿ ಬಾನೆಡೆಗೆ ಹಾರುವ ನೀರ್ಗೋಳಿಗಳು, ವನದೇವತೆಗೆ ಚಾಮರ ಬೀಸುತ್ತಿವೆಯೋ ಎನ್ನುವಂತೆ ಗರಿಬಿಚ್ಚಿ ನರ್ತಿಸುವ ನೂರಾರು ನವಿಲುಗಳು - ನಿತ್ಯವೂ ನಾವು ಕಾಣುವ ಮನಮೋಹಕ ದೃಶ್ಯಗಳು! ಹತ್ತಿರದ ಹಳ್ಳಿಗಳ ದೇವಾಲಯಗಳ ಮೇಲಿರುವ ಧ್ವನಿವರ್ಧಕಗಳಿಂದ ಕೇಳಿಬರುವ 'ಏಳಯ್ಯಾ ಬೆಳಗಾಯಿತು' ಎನ್ನುವ 'ಸುಪ್ರಭಾತ'! ಅದು ನಮ್ಮ ಕಿವಿಗಳಿಗೆ ಆಪ್ಯಾಯಮಾನವಾಗಿದ್ದರೂ ಬೆಳಗಿನ ಜಾವ ಗಾಢನಿದ್ರೆಯಲ್ಲಿರುವ 'ಸೂರ್ಯವಂಶಿ'ಗಳಿಗೆ ಕರ್ಣಕಠೋರ! ಬೆಳಗಿನ ಸವಿನಿದ್ರೆ ಕೆಟ್ಟುಹೋಯಿತೆಂದು 'ಹಾಳು ಸುಪ್ರಭಾತ' ರೆಕಾರ್ಡ್ ಹಾಕಿದವನಿಗೂ ಅವನ ದೇವರಿಗೂ ಆ ಕುಂಭಕರ್ಣರು 'ಶಾಪ' ಹಾಕದೆ ಬಿಡುವುದಿಲ್ಲ. ಈ ಸುಪ್ರಭಾತವು ದೇವರ ಸ್ತುತಿಯೋ ಅಥವಾ ಬೇಗನೆ ಏಳದ ಮಕ್ಕಳನ್ನು ತಂದೆತಾಯಿಗಳು ಬೈಯ್ಯುವಂತೆ ಊರೆಲ್ಲಾ ಕೇಳುವ ಹಾಗೆ ಮಾಡುವ ದೇವರನ್ನು ಕುರಿತ ಸುಸಂಸ್ಕೃತ ಬೈಗುಳವೋ (ನಿಂದಾಸ್ತುತಿ)? 'ನಿಮ್ಮ ದೇವರು ಮನುಷ್ಯನಂತೆ ಸೋಮಾರಿಯೇ, ದರಿದ್ರಗೇಡಿಯೇ, ಬೇಗನೆ ಏಳುವುದಿಲ್ಲವೇ?' ಎಂದು ಯಾರಾದರೂ ಪ್ರಶ್ನೆ ಮಾಡಿದರೆ ನಿಮ್ಮ ಉತ್ತರವೇನು? ದೇವರಿಗೂ ಆಯಾಸವಾಗುತ್ತದೆಯೇ, ನಿದ್ರಿಸುತ್ತಾನೆಯೇ? ಅವನು ನಿದ್ರೆ ಮಾಡತೊಡಗಿದರೆ ಜಗತ್ತಿನ ವ್ಯಾಪಾರ ನಡೆಯುವುದು ಹೇಗೆ? ಅವನು ಈ ಜಗತ್ತಿನ ನಿಯಂತ್ರಣವನ್ನು ವಿಮಾನದಲ್ಲಿರುವಂತೆ autopilot ಗೆ ಹಾಕಿ ವಿಶ್ರಮಿಸಿಕೊಳ್ಳುತ್ತಾನೆಯೇ? ಹೀಗೆ ಸಾಗುತ್ತದೆ ನಮ್ಮ ಸಂಭಾಷಣೆ ನಿತ್ಯವೂ ನಮ್ಮೊಡನೆ ವಾಯುವಿಹಾರದಲ್ಲಿ ಪಾಲ್ಗೊಳ್ಳುವ ಸಿರಿಗೆರೆಯ ಎಂ. ಬಸವಯ್ಯ ಕಾಲೇಜಿನ ನಿವೃತ್ತ ಫಿಲಾಸಫಿ ಪ್ರೊಫೆಸರ್ ಆದ ಡಿ.ಎಂ.ಎನ್ ಅವರೊಂದಿಗೆ. ವಾಕಿಂಗ್ ಮಾಡುವಾಗ ಮಾತನಾಡಬಾರದು ಎಂದು ಆರೋಗ್ಯಶಾಸ್ತ್ರಜ್ಞರು ಹೇಳುತ್ತಾರೆ. ಇನ್ನು ಕೆಲವರು ಜೋರಾಗಿ ನಗಬೇಕು ಎನ್ನುತ್ತಾರೆ. ಬೆಂಗಳೂರಿನ ಲಾಲ್‌ಬಾಗ್, ಕಬ್ಬನ್ ಪಾರ್ಕ್ ಇತ್ಯಾದಿ ಉದ್ಯಾನವನಗಳಲ್ಲಿ ವಾಯುವಿಹಾರ ಹೋಗುವ Laughing Club ಸದಸ್ಯರು ಒಂದೆಡೆ ನಿಂತು ನಗುತ್ತಿರುವ ದೃಶ್ಯಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡಿರುವುದನ್ನು ನೀವು ನೋಡಿರಬಹುದು. ನಗು ಆರೋಗ್ಯಕ್ಕೆ ಒಳ್ಳೆಯದು ನಿಜ. 'ನಗುವುದು ಸಹಜ ಧರ್ಮ, ನಗಿಸುವುದು ಪರಧರ್ಮ'. ಪ್ರಾಣಿಗಳು ಅಳುತ್ತವೆ, ಖುಷಿಪಡುತ್ತವೆ, ಸಿಟ್ಟಾಗುತ್ತವೆ ಆದರೆ ನಗುವಂತೆ ತೋರುವುದಿಲ್ಲ. ದೇವರು ಮನುಷ್ಯನಿಗೆ ಕೊಟ್ಟ ವಿಶಿಷ್ಟ ಕೊಡುಗೆ ನಗು. ಆದರೆ ಏನೂ ಕಾರಣವಿಲ್ಲದೆ ನಕ್ಕರೆ ಅವರನ್ನು ಹುಚ್ಚರು ಎನ್ನುತ್ತಾರೆ! ಅವರು ನಕ್ಕರೆಂದು ಇವರು ನಗುವ, ಇವರು ನಕ್ಕರೆಂದು ಅವರು ನಗುವ ಕೃತ್ರಿಮ ನಗುವಿನಿಂದ ಶರೀರದ ಸ್ನಾಯುಗಳು ಸಡಿಲಗೊಳ್ಳುವುದಿಲ್ಲ. ಸಹಜ ನಗುವಿನಿಂದ ಉಂಟಾಗುವ ಆಹ್ಲಾದಕರ ಅನುಭವ ಅದರಲ್ಲಿರುವುದಿಲ್ಲ. ಕೃತ್ರಿಮ ನಗೆಯಿಂದ ಶರೀರ ಪುಳಕಗೊಳ್ಳುವುದಿಲ್ಲ. ಅದು ಕಾಗದದ ಹೂವಿದ್ದಂತೆ. ನೋಡಲು ಚೆಂದ, ಆದರೆ ಸುಗಂಧವಿರುವುದಿಲ್ಲ.

ನಮ್ಮ ವಾಯುವಿಹಾರ ಕೇವಲ ವಾಯುವಿಹಾರವಾಗದೆ ಬೌದ್ಧಿಕ ವಿಚಾರಗಳ ವಿಹಾರವೂ ಆಗಿರುತ್ತದೆ. ಜರ್ಮನಿಯ ಪ್ರಮುಖ ನಗರಗಳಲ್ಲಿ ಹೈಡಲ್‌ಬರ್ಗ್ (Heidelberg) ಒಂದು. ವಿಯೆನ್ನಾದಲ್ಲಿ ಓದುತ್ತಿದ್ದಾಗ ಅಲ್ಲಿಗೆ ಹೋಗಿದ್ದ ನೆನಪು ಇನ್ನೂ ಹಚ್ಚಹಸಿರಾಗಿದೆ. ಒಂದುಕಾಲದಲ್ಲಿ ಕನ್ನಡ ಮತ್ತು ತಮಿಳು ಭಾಷೆಗಳ ಅಧ್ಯಯನ ಅಲ್ಲಿಯ ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿದ್ದು ಇತ್ತೀಚೆಗೆ ಕನ್ನಡದ ಅಧ್ಯಯನ ನಿಂತುಹೋಗಿದೆ. ತಮಿಳು ಮಾತ್ರ ಇನ್ನೂ ಇದೆ. ನಮ್ಮ ನಾಡಿನವರ 'ಖಿನ್ನಡಾಭಿಮಾನ'ಕ್ಕೆ ಇದೊಂದು ಜ್ವಲಂತ ಸಾಕ್ಷಿ! ಈ ನಗರದ ಬೆಟ್ಟದ ತಪ್ಪಲಿನಲ್ಲಿ ಫಿಲಾಸಫರ್ಸ್‌ವೇಗ್ (Philosophersweg) ಎಂಬ ಹೆಸರಿನ ಕಿರಿದಾದ ರಸ್ತೆ ಇದೆ. ಜರ್ಮನ್ ಭಾಷೆಯಲ್ಲಿ berg ಎಂದರೆ ಬೆಟ್ಟ, weg ಎಂದರೆ ದಾರಿ. ಈ ಬೆಟ್ಟದ ದಾರಿಯಲ್ಲಿ ಜರ್ಮನಿಯ ಅನೇಕ ಪ್ರಸಿದ್ಧ ತತ್ವಜ್ಞಾನಿಗಳು ವಾಯುವಿಹಾರ ಮಾಡುತ್ತಾ ಗಂಭೀರವಾದ ಚಿಂತನೆ ನಡೆಸುತ್ತಿದ್ದ ಕಾರಣ ಇದಕ್ಕೆ Philosophersweg ಎಂಬ ಹೆಸರು ಬಂದಿದೆ. ಜಗತ್ತಿನ ಯಾವ ಎರಡು ಗಡಿಯಾರಗಳೂ ಒಂದೇ ಸಮಯವನ್ನು ತೋರಿಸುವುದಿಲ್ಲ ಎಂಬಂತೆ ಜಗತ್ತಿನ ಯಾವ ಇಬ್ಬರು ತತ್ವಜ್ಞಾನಿಗಳ ವಿಚಾರಧಾರೆಯೂ ಒಂದೇ ತೆರನಾಗಿರುವುದಿಲ್ಲ. 'ಮುಂಡೇ ಮುಂಡೇ ಮತಿರ್ಭಿನ್ನಾ' ಎಂದು ಹೇಳುವುದು ಇದಕ್ಕಾಗಿಯೇ. 'ತಲೆಗೆ ಒಂದೊಂದು ಮಾತು' ಎಂಬ ಕನ್ನಡದ ಗಾದೆ ಮಾತು ಈ ಸೂಕ್ತಿಯ ಹತ್ತಿರಕ್ಕೆ ಬರುತ್ತದೆ. ಸಂಸ್ಕೃತದಲ್ಲಿ 'ಮುಂಡ' ಎಂದರೆ ಬೋಳಿಸಿದ ತಲೆ ಎಂದರ್ಥ. ಹಿಂದಿನ ಕಾಲದಲ್ಲಿ

ಸಂಪ್ರದಾಯಸ್ಥ ಮಹಿಳೆಯರು ಗಂಡ ಸತ್ತುಹೋದ ಮೇಲೆ ತಲೆ ಬೋಳಿಸುತ್ತಿದ್ದ ಕಾರಣ ವಿಧವೆಗೆ ಕನ್ನಡದಲ್ಲಿ 'ಮುಂಡೆ' ಎಂದು ಬಂದಿರಬಹುದು. ಅದೇನೇ ಇರಲಿ. ನಮ್ಮ ಮಾತುಗಳನ್ನು ಮೌನವಾಗಿ ಆಲಿಸುತ್ತಾ ಏನೊಂದೂ ಪ್ರತಿಕ್ರಿಯಿಸದ ನಮ್ಮ ಪೊಮೇರಿಯನ್ ಸಾಕುನಾಯಿಮರಿ 'ಮುನ್ನಿ' ನಮ್ಮನ್ನು ಮುಂದೆ ಮುಂದೆ ಎಳೆದೊಯ್ಯುತ್ತಿರುತ್ತದೆ. ದಿನನಿತ್ಯದ ವಾಯುವಿಹಾರ ಮುಗಿದರೂ ವಿಚಾರಗಳ ವಿಹಾರ ಮುಗಿದಿರುವುದಿಲ್ಲ! ಶಾರೀರಿಕವಾಗಿ ದಣಿವಾದರೂ ವಿಚಾರಗಳ ವಿನಿಮಯದಲ್ಲಿ ಬುದ್ಧಿ ಇನ್ನೂ ಮುಂದೆ ಮುಂದೆ ಓಡುತ್ತಿರುತ್ತದೆ! "Early bird catches worms" ಎನ್ನುವಂತೆ ಬೆಳಗಿನ ವಾಯುವಿಹಾರ ಅನೇಕ ವಿಚಾರಗಳ ಚಿಂತನೆಗೆ ದಾರಿಮಾಡಿಕೊಡುತ್ತದೆ. ಮೊನ್ನೆ ನಡೆದ ಅಂತಹ ಸಂಭಾಷಣೆಯಲ್ಲಿ ಚರ್ಚೆಗೆ ಗ್ರಾಸವಾದದ್ದು 'ಯಾರು ಒಳ್ಳೆಯವರು, ಯಾರು ಕೆಟ್ಟವರು?' ಎಂಬ ವಿಷಯ.

ಮಾತಿನ ಪ್ರಸಂಗದಲ್ಲಿ ಆತ್ಮೀಯ ಸ್ನೇಹಿತರು ನಿಮಗೆ 'ಅವನು ಒಳ್ಳೆಯವನಲ್ಲ, ಬಹಳ ಹುಷಾರಾಗಿರು' ಎಂದು ಎಚ್ಚರಿಸುತ್ತಾರೆ. ಬಸವಣ್ಣನವರೂ ಸಹ ಹೀಗೆ ಹೇಳುತ್ತಾರೆ:

**ಸಾರ, ಸಜ್ಜನರ ಸಂಗವ ಮಾಡುವುದು**
**ದೂರ ದುರ್ಜನರ ಸಂಗ ಬೇಡವಯ್ಯಾ**
**ಆವ ಹಾವಾದಡೇನು, ವಿಷವೊಂದೇ**
**ಅಂಥವರ ಸಂಗ ಬೇಡವಯ್ಯಾ!**
**ಅಂತರಂಗ ಶುದ್ಧವಿಲ್ಲದವರ ಸಂಗ**
**ಸಿಂಗಿ, ಕಾಳಕೂಟ ವಿಷವೋ ಅಯ್ಯಾ ಕೂಡಲಸಂಗಮದೇವಾ**

ಹಾಗಾದರೆ ಯಾರು ಒಳ್ಳೆಯವರು, ಯಾರು ಕೆಟ್ಟವರು? ಇವರು ಒಳ್ಳೆಯವರು, ಅವರು ಒಳ್ಳೆಯವರಲ್ಲ ಎಂದು ತಿಳಿದುಕೊಳ್ಳಲು ಇರುವ ಮಾನದಂಡವಾದರೂ ಏನು? ಯಾವ ವ್ಯಕ್ತಿಯೂ ಸಂಪೂರ್ಣ ಒಳ್ಳೆಯವನು, ಸಂಪೂರ್ಣ ಕೆಟ್ಟವನು ಆಗಿರುವುದಿಲ್ಲ. ಸದ್ಗುಣ ಮತ್ತು ದುರ್ಗುಣಗಳು ಪ್ರತಿಯೊಬ್ಬ ಮನುಷ್ಯನಲ್ಲೂ ಇರುತ್ತವೆ. ಅವುಗಳ ಪ್ರಮಾಣ ಮಾತ್ರ ಅವರವರ ಸಂಸ್ಕಾರಕ್ಕನುಗುಣವಾಗಿ ಬೇರೆಬೇರೆಯಾಗಿರುತ್ತದೆ. ಮಾನವನ ಇತಿಹಾಸದುದ್ದಕ್ಕೂ ಒಳ್ಳೆಯ ಮತ್ತು ಕೆಟ್ಟ ವ್ಯಕ್ತಿಗಳ ಮಧ್ಯೆ ನಿರಂತರವಾಗಿ ಸಂಘರ್ಷ ನಡೆಯುತ್ತಾ ಬಂದಂತೆ ಪ್ರತಿಯೊಬ್ಬ ವ್ಯಕ್ತಿಯ ಮನಸ್ಸಿನೊಳಗೆ ಸದ್ಗುಣ-ದುರ್ಗುಣಗಳ ತುಮುಲ ನಡೆಯುತ್ತಿರುತ್ತದೆ. ಆ ತುಮುಲದಲ್ಲಿ ಆಯಾಯ ವ್ಯಕ್ತಿಯ ಸಂಸ್ಕಾರ ಮತ್ತು ಪರಿಸರಕ್ಕನುಗುಣವಾಗಿ ಅವುಗಳಲ್ಲಿ ಪ್ರಬಲವಾದುದು ಪ್ರಕಟಗೊಂಡು ಒಳ್ಳೆಯವನು ಅಥವಾ ಕೆಟ್ಟವನು ಎಂದು ಕರೆಸಿಕೊಳ್ಳುತ್ತಾನೆ. ನಮ್ಮ ಅನುಭವದಲ್ಲಿ ಉಪಕಾರ ಪಡೆದ ವ್ಯಕ್ತಿ ಕೃತಜ್ಞನಾಗುವುದಿರಲಿ, ಸ್ವಾರ್ಥಸಾಧನೆಗಾಗಿ ಅಪಕಾರ ಮಾಡಲೂ ಹೇಸುವುದಿಲ್ಲ.

**ಶ್ರೇಯಶ್ಚ ಪ್ರೇಯಶ್ಚ ಮನುಷ್ಯಮೇತಃ**
**ತೌ ಸಂಪರೀತ್ಯ ವಿವಿನಕ್ತಿ ಧೀರಃ ।**
**ಶ್ರೇಯೋ ಹಿ ಧೀರೋಽಭಿಪ್ರೇಯಸೋ ವೃಣೀತೇ**
**ಪ್ರೇಯೋ ಮಂದೋ ಯೋಗಕ್ಷೇಮಾದ್ ವೃಣೀತೇ (ಕಠೋಪನಿಷತ್ 1.2.2)**

ಕಠೋಪನಿಷತ್ತಿನ ಪ್ರಕಾರ ಶ್ರೇಯಸ್ಸು ಮತ್ತು ಪ್ರೇಯಸ್ಸು ಎರಡೂ ಒಟ್ಟೊಟ್ಟಿಗೇ ಮನುಷ್ಯನ ಹತ್ತಿರ ಬರುತ್ತವೆ. ವಿವೇಕಿಯು ಸಾಕಷ್ಟು ಆಲೋಚಿಸಿ ತನಗೆ ಶಾಶ್ವತ ಸುಖವನ್ನು ನೀಡುವ ಶ್ರೇಯಸ್ಕರವಾದುದನ್ನು ಆಯ್ಕೆಮಾಡಿಕೊಳ್ಳುತ್ತಾನೆ. ಅವಿವೇಕಿಯು ಬಾಹ್ಯ ಆಕರ್ಷಣೆಗೆ ಒಳಗಾಗಿ ತನಗೆ ತಾತ್ಕಾಲಿಕ ಸುಖವನ್ನು ನೀಡುವ ಪ್ರಿಯವಾದುದನ್ನು ಆಯ್ಕೆಮಾಡಿಕೊಳ್ಳುತ್ತಾನೆ. ಒಂದು ಪಾರಮಾರ್ಥಿಕ ಆದರ್ಶ ಮತ್ತೊಂದು ಲೌಕಿಕ ಆಸಕ್ತಿ. ಜೀವನಾದರ್ಶದ ಈ ಹಿತೋಕ್ತಿಗಳು ಪ್ಲೇಟೋನ ರಿಪಬ್ಲಿಕ್‌ನಲ್ಲಿ ಬರುವ ಮುಂದಿನ ಸಾಲುಗಳನ್ನು ನೆನಪಿಗೆ ತರುತ್ತವೆ: "In every one of us, there are two ruling and directing principles, whose guidance we follow wherever they may lead; the one being an innate device of pleasure, the other an acquired judgement which aspires after excellence."

ಸಾಕ್ರಟೀಸನ ಪ್ರಕಾರ ಮನುಷ್ಯ ಎಷ್ಟೇ ಒಳ್ಳೆಯವನಾಗಿದ್ದರೂ ಅವಕಾಶವಂಚಿತನಾದ ಕಾರಣ ಅವನು ಒಳ್ಳೆಯವನಾಗಿರುತ್ತಾನೆಯೇ ಹೊರತು ಮುಕ್ತ ಅವಕಾಶ ಸಿಕ್ಕಲ್ಲಿ ಒಳ್ಳೆಯವನೆನಿಸಿಕೊಂಡವನೂ ಸಹ ಒಳ್ಳೆಯ ದಾರಿಯಲ್ಲಿ ಕ್ರಮಿಸದೆ ಕೆಟ್ಟವನಂತೆ ಕೆಟ್ಟದಾರಿಯನ್ನು ಹಿಡಿಯುತ್ತಾನೆ. ಸಾಕ್ರಟೀಸನ ಈ ವಿಚಾರಧಾರೆ 'ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟ ನೆಗೆದಂತಾಯಿತ್ತು' ಎಂಬ ದೇವರದಾಸಿಮಯ್ಯನ ವಚನವನ್ನು ಹೋಲುತ್ತದೆಯೆಂದು ಮೇಲ್ನೋಟಕ್ಕೆ ಕಂಡುಬಂದರೂ 'ಎನಿಸೆನಿಸೆಂದೊಡೆ ನಾ ಧೃತಿಗೆಡೆನಯ್ಯಾ' ಎಂಬ ಗಟ್ಟಿನಿಲುವುಳ್ಳ ಆದರ್ಶ ವ್ಯಕ್ತಿಗಳು ಇರುವುದನ್ನು ಶರಣರು ಅಲ್ಲಗಳೆಯುವುದಿಲ್ಲ. ಇದಕ್ಕೆ ಪೂರಕವಾಗಿ "ವಿಕಾರಹೇತೌ ಸತಿ ವಿಕ್ರಿಯಂತೇ ಯೇಷಾಂ ನ ಚೇತಾಂಸಿ ತ ಏವ ಧೀರಾಃ" ಅಂದರೆ 'ಮನಸ್ಸನ್ನು ವಿಕೃತಗೊಳಿಸುವ ವಸ್ತು ಎದುರಿಗಿದ್ದರೂ ವಿಕಾರಗೊಳ್ಳದವರೇ ಧೀರರು' ಎಂಬ ಮಾತು ಕಾಳಿದಾಸನ ಕುಮಾರಸಂಭವದಲ್ಲಿ (1.59) ಬರುತ್ತದೆ. ಈ ಮಾತಿಗೆ ತದ್ವಿರುದ್ಧವಾದ ನಿಲುವನ್ನು ಸಾಕ್ರಟೀಸನಲ್ಲಿ ಕಾಣಬಹುದಾಗಿದೆ. ಒಳ್ಳೆಯ ಮನುಷ್ಯ ಮತ್ತು ಕೆಟ್ಟ ಮನುಷ್ಯ ಎಂದು ಯಾರನ್ನು ತಿಳಿದುಕೊಂಡಿದ್ದೇವೋ ಅವರಿಬ್ಬರಿಗೂ ಮನಸ್ಸಿಗೆ ಬಂದಂತೆ ನಡೆಯುವ ಸ್ವಾತಂತ್ರ್ಯವಿದ್ದಲ್ಲಿ ಒಳ್ಳೆಯ ಮನುಷ್ಯನೂ ಸಹ ಕೆಟ್ಟ ಮನುಷ್ಯನಂತೆ ನಡೆಯುತ್ತಾನೆ ಎಂಬುದು ಸಾಕ್ರಟೀಸನ ಸಿದ್ಧಾಂತ. ಅದಕ್ಕೆ ಅವನು ಕೊಡುವ ದೃಷ್ಟಾಂತ ಹೀಗಿದೆ:

ಲಿಡಿಯಾ (Lydia) ಎಂಬ ದೇಶದಲ್ಲಿ ಒಬ್ಬ ದೊರೆಯಿದ್ದ. ಅವನ ಆಶ್ರಯದಲ್ಲಿ ಗೈಗಸ್ (Gyges) ಎಂಬ ಹೆಸರಿನ ಒಬ್ಬ ಕುರುಬನಿದ್ದ. ಅವನು ಒಂದು ದಿನ ಕಾಡಿನಲ್ಲಿ ಕುರಿಗಳನ್ನು ಮೇಯಿಸುತ್ತಿರುವಾಗ ಭಾರೀ ಬಿರುಗಾಳಿ ಎದ್ದು ಜೊತೆಗೆ ಭೀಕರ ಭೂಕಂಪ ಉಂಟಾಗಿ ಭೂಮಿಯಲ್ಲಿ ದೊಡ್ಡ ಬಿರುಕು ಉಂಟಾಯಿತು. ಗೈಗಸ್ ಆ ಬಿರುಕನ್ನು ಬಗ್ಗಿ ನೋಡಲಾಗಿ ಅಲ್ಲಿ ಅನೇಕ ಆಶ್ಚರ್ಯಕರ ವಸ್ತುಗಳು ಇರುವುದು ಕಾಣಿಸಿತು. ಅವನು ಕುತೂಹಲದಿಂದ ಕೆಳಗೆ ಇಳಿದು ಹೋದ. ಅಲ್ಲಿ ಅವನಿಗೆ ಒಂದು ಕಂಚಿನ ಕುದುರೆ ಕಾಣಿಸಿತು. ಅದರ ಹೊಟ್ಟೆ ಟೊಳ್ಳಾಗಿತ್ತು. ಇಣುಕಿ ನೋಡಿದಾಗ ಅದರೊಳಗೆ ಒಬ್ಬನ ಶವವಿತ್ತು. ಆ ಶವದ ಕೈಯಲ್ಲಿ ಒಂದು ಬಂಗಾರದ ಉಂಗುರವಿತ್ತು. ಗೈಗಸ್ ಆ

ಉಂಗುರವನ್ನು ತೆಗೆದುಕೊಂಡು ತನ್ನ ಕೈಬೆರಳಿಗೆ ತೊಡಿಸಿಕೊಂಡ. ಮೇಲೆ ಬಂದು ಎಂದಿನಂತೆ ಕುರಿಗಳನ್ನು ಹೊಡೆದುಕೊಂಡು ಮನೆಗೆ ಬಂದ. ಕೈಬೆರಳಿನಲ್ಲಿದ್ದ ಆ ಉಂಗುರವನ್ನು ನೋಡಿ ಖುಷಿಪಡುತ್ತಿದ್ದ. ತಿಂಗಳಿಗೊಮ್ಮೆ ರಾಜನಿಗೆ ಕುರಿಗಳ ಬಗ್ಗೆ ವರದಿಕೊಡಲು ಎಲ್ಲ ಕುರುಬರೂ ಒಂದೆಡೆ ಸೇರಿದ್ದರು. ಗೈಗಸ್ ಆ ಉಂಗುರವನ್ನು ಧರಿಸಿಕೊಂಡೇ ಹೋದ. ಆಕಸ್ಮಿಕವಾಗಿ ಆ ಉಂಗುರದ ಮೇಲಿರುವ ಕೆಂಪುಹರಳನ್ನು ತನ್ನೆಡೆಗೆ ಸರಿಸಿಕೊಂಡ. ಆಶ್ಚರ್ಯದ ಸಂಗತಿಯೆಂದರೆ ಅವನು ಇದ್ದಕ್ಕಿದ್ದಂತೆಯೇ ಯಾರಿಗೂ ಕಾಣಿಸದಂತೆ ಅದೃಶ್ಯನಾದ. ನಂತರ ಗೈಗಸ್ ಎಲ್ಲಿ ಎಲ್ಲಿ ಎಂದು ಅವನ ಸ್ನೇಹಿತರು ಕೇಳುತ್ತಿದ್ದಂತೆಯೇ ಮೊದಲಿದ್ದಂತೆ ತಿರುಗಿಸಿದಾಗ ಎಲ್ಲರಿಗೂ ಕಾಣಿಸಿಕೊಂಡ. ನಂತರ ಎರಡು ಮೂರು ಬಾರಿ ಹೀಗೆ ಪ್ರಯೋಗ ಮಾಡಿದಾಗ ಅವನಿಗೆ ಅದರ ರಹಸ್ಯ ತಿಳಿಯಿತು. ಉಂಗುರದ ಕೆಂಪುಹರಳನ್ನು ಒಳಮುಖವಾಗಿ ತಿರುಗಿಸಿದಾಗ ಅದೃಶ್ಯನಾಗುವ, ಹೊರಮುಖವಾಗಿ ತಿರುಗಿಸಿದಾಗ ಮಾತ್ರ ಎಲ್ಲರಿಗೂ ಕಾಣಿಸುವ ಮಾಂತ್ರಿಕ ಶಕ್ತಿ ಆ ಉಂಗುರಕ್ಕೆ ಇದೆಯೆಂದು ಮನಗಂಡ. ಮಾರನೆಯ ದಿನವೇ ಗೈಗಸ್ ತನ್ನ ಸ್ನೇಹಿತರೊಂದಿಗೆ ರಾಜನನ್ನು ಕಾಣಲು ಅರಮನೆಗೆ ಹೋದ. ಇತರ ಸ್ನೇಹಿತರು ವರದಿಯನ್ನು ರಾಜನಿಗೆ ಒಪ್ಪಿಸುತ್ತಿದ್ದಂತೆಯೇ ಗೈಗಸ್ ತಾನು ಧರಿಸಿದ್ದ ಉಂಗುರವನ್ನು ಒಳಮುಖವಾಗಿ ತಿರುಗಿಸಿ ಸೀದಾ ರಾಣಿಯ ಅಂತಃಪುರಕ್ಕೆ ಹೋದ. ಅವಳೊಂದಿಗೆ ಚಕ್ಕಂದವಾಡಿ ಅವಳ ದೇಹ ಸುಖವನ್ನು ಪಡೆದ. ಅವಳನ್ನು ತನ್ನ ಕೈವಶಮಾಡಿಕೊಂಡು ಅವಳ ಸಹಾಯವನ್ನು ಪಡೆದು ರಾಜನನ್ನು ಕೊಂದು ಹಾಕಿ ತಾನೇ ದೊರೆಯೆಂದು ಘೋಷಿಸಿಕೊಂಡು ಸಿಂಹಾಸನವನ್ನೇರಿದ !

ಅಂತಹ ಉಂಗುರ ಒಬ್ಬ ಒಳ್ಳೆಯ ಮನುಷ್ಯನ ಕೈಗೆ ಸಿಕ್ಕರೆ ನೈತಿಕತೆಯಲ್ಲಿ ಎಂತಹ ಗಟ್ಟಿಗನಾದರೂ ದೌರ್ಬಲ್ಯಕ್ಕೆ ಒಳಗಾಗುವುದಿಲ್ಲವೇ ಎಂಬುದೇ ಇಲ್ಲಿಯ ಯಕ್ಷಪ್ರಶ್ನೆ. ಸಾಕ್ರಟೀಸನ ಈ ಪ್ರಶ್ನೆಗೆ ಉತ್ತರಿಸುವ ಎದೆಗಾರಿಕೆ ಬಸವಣ್ಣನಿಗಿರುವುದನ್ನು ಈ ಮುಂದಿನ ವಚನದಲ್ಲಿ ಕಾಣಬಹುದು:

**ನುಡಿದಂತೆ ನಡೆವೆ, ನಡೆಯೊಳಗೆ ನುಡಿಯ ಪೂರೈಸುವೆ**
**ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ**
**ಒಂದು ಜವೆ ಕೊರತೆಯಾದೊಡೆ**
**ಎನ್ನನದ್ದಿ ನೀನೆದ್ದುಹೋಗಾ ಕೂಡಲಸಂಗಮ ದೇವಾ!**

ಆಧ್ಯಾತ್ಮಿಕ ತಕ್ಕಡಿಯ ಒಂದು ತಟ್ಟೆಯಲ್ಲಿ ತನ್ನ ನುಡಿಯನ್ನೂ, ಇನ್ನೊಂದು ತಟ್ಟೆಯಲ್ಲಿ ತನ್ನ ನಡತೆಯನ್ನೂ ಇಟ್ಟು ತೂಗಿ ಒಂದು ಕೂದಲೆಳೆಯಷ್ಟೂ ವ್ಯತ್ಯಾಸವಾಗದಂತೆ ನೋಡಿಕೊಳ್ಳುವ ನಡೆ-ನುಡಿಗಳ ಈ ಪಾರದರ್ಶಕತೆಯೇ ಆಧ್ಯಾತ್ಮಿಕ ಸಿದ್ಧಿಗೆ ಸೋಪಾನ! ದೇವರಿಗೆ ಬೆಳ್ಳಿ/ಬಂಗಾರದ ಮುಖಪದ್ಮವನ್ನು ತೊಡಿಸಿ ತನ್ನ ಮುಖವನ್ನು ಮರೆಮಾಡಿಕೊಳ್ಳುವುದಲ್ಲ. ಈ ಹಿನ್ನೆಲೆಯಲ್ಲಿಯೇ ಬಸವಣ್ಣನವರ ಸೋದರಳಿಯನಾದ ಚೆನ್ನಬಸವಣ್ಣ ಉದ್ಗರಿಸಿದ್ದು:

"ಲಕ್ಷಕ್ಕೊಬ್ಬ ಭಕ್ತ ! ಕೋಟಿಗೊಬ್ಬ ಶರಣ!"

24.6.2009

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑